UNSTARRED QUESTIONS AND ANSWERS

Special Programme for Centenary Celebration of Mahatma Gandhi

4. ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—

Will the Minister for Education be pleased to state :—

(ಅ) ರಾಜ್ಯ ಸರಕಾರ ಗಾಂಧೀ ಶತಮಾನೋತ್ಸವದ ಅಂಗವಾಗಿ ವಿಶೇಷ ಕಾರ್ಯಕ್ರಮ ಗೊತ್ತುಮಾಡಿ ಅದನ್ನು ಆಚರಣೆಗೆ ತರಲು ತಾರೀಖು 2-10-1968 ರಿಂದ 2-10-1969ರ ವರೆಗೆ ಒದಗಿಸಿರುವ ಹಣ ಎಷ್ಟು ?

(ಆ) ಈ ಶತಾಬ್ದಿ ಯೋಜನೆಗಳಲ್ಲಿ ಹರಿಜನರ ಪುರೋಭಿವೃದ್ಧಿ ಕಾರ್ಯದಲ್ಲಿ ರಾಜ್ಯ ಸರಕಾರ ಕೈಕೊಂಡಿರುವ ಕಾರ್ಯಗಳಾವುವು ? ಅವುಗಳಿಗಾಗಿ ಒದಗಿಸಿರುವ ಹಣವೆಷ್ಟು ?

Sri K. V. SHANKARA GOWDA (Minister for Education).—

(ಅ) ರೂ 1,00,000 ಮಾತ್ರ.

(ಆ) (1) ಪ್ರತಿಯೊಂದು ಹಳ್ಳಿಗಳಲ್ಲಿಯೂ, ಮುಖ್ಯವಾಗಿ ಹರಿಜನರ ಕೇರಿಗಳಲ್ಲಿ ಕುಡಿಯುವ ನೀರಿನ ಭಾವಿ ತೆಗೆಯಲು ಪ್ರಾಮುಖ್ಯತೆಯನ್ನು ಕೊಡಲಾಗಿದೆ.

(2) ರಾಜ್ಯದ ಮಟ್ಟದಲ್ಲಿ ಭಂಗಿ ಮುಕ್ತಿಯ ಅಂಗವಾಗಿ ಸುಲಭ ಶೌಚಾಲಯಗಳನ್ನು ಕಟ್ಟಿಸುವ ಏರ್ಪಾಡು ಮಾಡಲಾಗುತ್ತಿದೆ.

(3) ತಾರೀಖು 1-5-1969 ರಲ್ಲಿ ಮಹಾಬೋಧಿ ಸಂಸ್ಥೆಯ ಮುಖಾಂತರ ಸಂಸ್ಥಾನದ 50 ಹರಿಜನ ಬಾಲಕರಿಗೆ ಗಾಂಧೀಜಿಯವರ ತತ್ವಗಳ ವಿಷಯವಾಗಿ ತಿಳುವಳಿಕೆ ಕೊಟ್ಟು ಅವರು ತಮ್ಮ ತಮ್ಮ ಕೇರಿಗಳಲ್ಲಿ ಆ ತತ್ವಗಳನ್ನು ಆಚರಣೆಗೆ ತರುವಂತೆ ಶಿಕ್ಷಣ ಕೊಡುವುದಕ್ಕಾಗಿ ಶಿಬಿರವನ್ನು ಏರ್ಪಡಿಸಲಾಯಿತು.

(4) ಹರಿಜನ ಸಮಾಜ ಸೇವಕರನ್ನು 10 ದಿವಸಗಳಿಗೆ ವಾರ್ಧಾಕುಟೀರದಲ್ಲಿ ಶಿಕ್ಷಣ ಪಡೆಯಲು ಪ್ರತಿಯೊಬ್ಬರಿಗೂ ಹೋಗಿ ಬರುವ ಖರ್ಚಿಗಾಗಿ 100 ರೂಪಾಯಿಗಳನ್ನು ಕೊಟ್ಟು ಕಳುಹಿಸಿ ಕೊಡಲಾಗುತ್ತಿದೆ.

(5) ಕೊರಟಗೆರೆಯಲ್ಲಿ 29-6-1969 ರಲ್ಲಿ ನಡೆದ ಹರಿಜನ ಸಮಿತಿಗೆ ಕೊರಟಗೆರೆಯಲ್ಲಿ ಉಚಿತ ವಾಚನಾಲಯವನ್ನು ಏರ್ಪಡಿಸುವುದಕ್ಕೆ ಮತ್ತು ಇತರ ಕಾರ್ಯಕಲಾಪಗಳಿಗೆ ರೂಪಾಯಿ 500 ಹಣ ಸಹಾಯವನ್ನು ಒದಗಿಸಿಕೊಟ್ಟಿದೆ.

(6) ಹರಿಜನ ಗಿರಿಜನ ಕೇರಿಗಳಲ್ಲಿ ಉಚಿತ ವಾಚನಾಲಯಗಳನ್ನು ಏರ್ಪಡಿಸಿದರೆ ಅಂತಹ ಉತ್ತಮ ಕೆಲಸಗಳಿಗೆ ಪ್ರೋತ್ಸಾಹವನ್ನು ನೀಡಲಾಗುತ್ತಿದೆ.

(7) ಹರಿಜನ ಗಿರಿಜನ ಕೇರಿಗಳಲ್ಲಿ ಮಕ್ಕಳಿಗೋಸ್ಕರ ಬಾಪೂ ಬಾಲ ವಾಡಿಗಳನ್ನು ನಿರ್ಮಿಸಿ ಗ್ರಾಮಸೇವಕಿಯರ ಮೂಲಕ ಸಣ್ಣಮಕ್ಕಳಿಗೆ ಆರಂಭ ಪಾಠ ಕಲಿಸಲಾಗುವುದು.

(8) ಹರಿಜನ ಕೇರಿಗಳಲ್ಲಿ 6,000 ರೂಪಾಯಿಗಳಿಗೆ ಒಂದೊಂದು ಸಾಮೂಹಿಕ ಕೇಂದ್ರವನ್ನು ಕಟ್ಟಬೇಕೆಂದು ತಿರ್ಮಾನಿಸಿದೆ.

(9) ಮೇಲೆ ನಮೂದಿಸಿದ ಕಾರ್ಯಕ್ರಮಗಳಲ್ಲದೆ ರಾಜ್ಯ ಸರಕಾರವು ಸಮಾಜ ಕಲ್ಯಾಣ ಇಲಾಖೆಯ ಮೂಲಕ 1968-69 ಮತ್ತು 1969-70 ನೇ ಸಾಲಿನಲ್ಲಿ ಹರಿಜನರ ಪುರೋಭಿವೃದ್ಧಿ

(SRI K. V. SHANKARA GOWDA)

ಗಾಗಿ ಕೆಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಅವುಗಳಿಗೆ ಒದಗಿಸಿರುವ ಹಣವನ್ನು ಕೆಳಗೆ ನಮೂದಿಸಲಾಗಿದೆ.

(ಲಕ್ಷ ರೂಪಾಯಿಗಳಲ್ಲಿ)

ಯೋಜನೆಗಳು	ವಾರ್ಷಿಕ ಮತ್ತು ಪಂಚ ವಾರ್ಷಿಕ ಯೋಜನೆಯಾನುಸಾರ ರಾಜ್ಯ ಸರಕಾರ ಒದಗಿಸಿರುವ ಹಣ		ಯೋಜನೇತರ ಅಭಿವೃದ್ಧಿ ಕಾರ್ಯಗಳಿಗೆ	
	1968—69	1969—70	1968—69	1969—70
1. ಹರಿಜನ ವಿದ್ಯಾಭ್ಯಾಸ ಕ್ಕಾಗಿ.	28.28	21.43	...	...
2. ಹರಿಜನರ ಆರ್ಥಿಕ ಅಭಿವೃದ್ಧಿಗಾಗಿ.	5.03	10.95	...	...
3. ಆರೋಗ್ಯಮತ್ತು ವಸತಿ ನಿರ್ಮಾಣ ಮತ್ತು ಇತರೆ ಕಾರ್ಯಕ್ರಮ ಗಳಿಗಾಗಿ.	6.25	7.18	...	...
4. ಪಾಠಶಾಲೆ ಮತ್ತು ಹಾಸ್ಟಲುಗಳಿಗಾಗಿ.	...	...	55.297	78.140
5. ಹರಿಜನ ಮತ್ತು ಗಿರಿಜನರ ಪೋಸ್ಟ್ ಮೆಟ್ರಿಕ್ ಸ್ಕಾಲರ್‌ಷಿಪ್ ಗಾಗಿ (ಕೇಂದ್ರ ಸರ್ಕಾರ)	...	...	9.125	14.950
6. ಹರಿಜನರ ಶಿಶುವಿಹಾರ ಕ್ಕಾಗಿ	...	...	18.278	20.700
7. ಹರಿಜನರ ಹೊಲಿಗೆ ಶಿಕ್ಷಣ ಕೇಂದ್ರಕ್ಕಾಗಿ	...	...	5.925	7.610
ಒಟ್ಟು ...	39.56	39.56	88.625	121.274